ಅತ್ಯುತ್ಕೃಷ್ಟ ಸತ್ವತತ್ತ್ವಗಳನ್ನೂ, ಅತ್ಯಧಿಕ ಪ್ರಮಾಣದಲ್ಲಿ, ಅತ್ಯಂತ ಪ್ರಭಾವಶಾಲಿಯಾಗಿ ಅಭಿವ್ಯಕ್ತಿಸಿದ್ದಾರೆ. ಒಂದು ರೀತಿಯಲ್ಲಿ ಅಪೌರುಷೇಯವೆನಿಸಬಹುದಾದ ಸಾಮರ್ಥ್ಯವನ್ನು ಮೆರೆದಿದ್ದಾರೆ. ಅಂತರ್‌ದೃಷ್ಟಿಯ, ಕಾರ್ಯಕಾರಣಕ್ಕೆ ಅತೀತವಾದ ಶ್ರೇಷ್ಠಗ್ರಹಣ ಸಾಮರ್ಥ್ಯವುಳ್ಳ, ನಿಜವಾದ ವಿಭೂತಿಯಾದ ಅವರ ವಿಶಿಷ್ಟ ಅಭಿವ್ಯಕ್ತಿಯಲ್ಲಿ, ಅವರ ಕಾಲಮಾನದ ಜನಾಂಗವು, ಅತ್ಯುತ್ಕೃಷ್ಟವಾದ ರೀತಿಯಲ್ಲೇ ಪ್ರಕಾಶಮಾನವಾಗಿ ತನ್ನನ್ನು ತಾನು ಪ್ರಕಟಪಡಿಸಿಕೊಂಡಿದೆ.

ಸ್ವಾಮೀಜಿಯವರ ತ್ಯಾಗಜೀವನದ ಮಹತ್ವವನ್ನು ಬಣ್ಣಿಸುವ ಸುಪ್ರಸಿದ್ಧವಾದ ಕವಿತೆಯಾದ 'ಸಂನ್ಯಾಸಿ ಗೀತೆ' ಸಂನ್ಯಾಸಿಗೆ ತನ್ನನ್ನು ತಾನು ಜಯಿಸಿದವ, ಮುಕ್ತನಾಗುವುದನ್ನು ಮನವರಿಕೆ ಮಾಡುವಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ಜಂಗಮ ಜಗತ್ತಿನ ನಿರಂತರ ಚಲನೆಯನ್ನು ಪ್ರವೇಶಿಸಿ, ವಸ್ತುಸತ್ಯವನ್ನು ಗ್ರಹಿಸಿ ರೂಪಿಸುವ ಅವರ ಅನನ್ಯ ಶಕ್ತಿಯ ಅಭಿವ್ಯಕ್ತಿಯಾಗಿ ಮೂಡಿಬಂದಿರುವ ಈ ಗೀತೆಯ ನುಡಿಯೊಂದನ್ನು ಗಮನಿಸಿ:

**ಕತ್ತಲಳಿಯಲಿ; ಮಬ್ಬು ಕವಿಸುವ ಭವದ ತೃಷ್ಣೆಯು ಬತ್ತಲಿ;**
**ಬಾಳಮೋಹವು ಮರುಮರೀಚಿಕೆ; ಮಾಯೆ ಕೆತ್ತಿದ ಪುತ್ಥಳಿ!**
**ಜನನದೆಡೆಯಿಂದ ಮರಣದೆಡೆಗಾಗೆಳೆವುದೆಮ್ಮನು ದೇಹವು !**
**ಜನ್ಮಜನ್ಮದಿ ಮರಳಿ ಮರಳುವುದೆಮ್ಮ ಬಿಗಿಯಲು ಮೋಹವು !**
**ತನ್ನ ಜಯಿಸಿದ ಶಕ್ತನು – ಅವನೆಲ್ಲ ಜಯಿಸಿದ ಮುಕ್ತನು !**
**ಎಂಬುದನು ತಿಳಿ; ಹಿಂಜರಿಯದಿರು,**
**ಸಂನ್ಯಾಸಿಯೇ, ನಡೆ ಮುಂದಕೆ.**
**ಗುರಿಯು ದೊರಕುವವರೆಗೆ ನಡೆ ನಡೆ;**
**ನೋಡದಿರು ನೀ ಹಿಂದಕೆ.**

ಇದೇ ಅಲ್ಲವೇ ಅಪ್ಪಟ ಕವಿಪ್ರತಿಭೆಯೆಂದರೆ ! ಕವಿತೆ ಇಲ್ಲಿ ವೈಯಕ್ತಿಕ ಸ್ವರೂಪದಿಂದಾಚೆಗೆ ಜಿಗಿದು, ಸಾಮಾಜಿಕ ಸ್ವರೂಪದ ಬಯಲಿಗೆ ಬಂದಿದೆ. ಅಂದರೆ ವ್ಯಷ್ಟಿ ನೆಲೆಯಲ್ಲಿ ಜನಿಸಿ, ಸಮಷ್ಟಿಯ ಸೆಲೆ ದಕ್ಕಿಸಿಕೊಂಡಿದೆ. ನಿರಪೇಕ್ಷತೆ, ಪರಿಶುದ್ಧತೆ ಮತ್ತು ಪ್ರಾಮಾಣಿಕತೆಗಳಂತಹ ಮೌಲ್ಯಗಳು ಕಾವ್ಯರಚನೆಯನ್ನು ಇಲ್ಲಿ ಮುನ್ನಡೆಸಿವೆ. ಇಲ್ಲಿರುವ ಸರಳ ಸುಂದರ ಪದಗಳಲ್ಲಿ ಅನೇಕ ಪ್ರಕಾರವಾಗಿ ಇರುವ ಅರ್ಥವೈಶಾಲ್ಯ, ಔಚಿತ್ಯಪ್ರಜ್ಞೆಯಿಂದ ಕವಿತೆಯನ್ನು ಕಟ್ಟಿರುವ ಕ್ರಮಗಳು, ಸ್ವಾಮೀಜಿಯವರು ಧ್ವನಿಪೂರ್ಣವಾದ ಶ್ರೇಷ್ಠ ರೂಪಕ ಉಪಮೆಗಳ ಮೂಲಕ ತಮ್ಮ ಅಂತರಂಗದ ಅನುಭವ ಅನುಭಾವಗಳಿಗೆ ಉಚಿತವಾದ ಶಕ್ತ ಶಬ್ದಗಳಲ್ಲಿ ಆಕಾರ ನೀಡಿರುವುದನ್ನು ಮನಗಾಣಿಸುತ್ತವೆ.

ಹೀಗೆ ಮನದಾಳದ ಮಂಥನದಲ್ಲಿ ಮೂಡಿ ಹೊಳೆದ ವಿಚಾರಗಳಿಗೆ ಮಾತಿನ ಮೈ ನೀಡುವ ಸಮಾಧಿಸ್ಥವಾದ ಸ್ವಾಮೀಜಿಯವರ 'ಪ್ರಜ್ಞಾ ನವನವೋನ್ಮೇಷಶಾಲಿನಿ' ಗೆ ಮನ ಸೋಲದವರ್‍ಯಾರು!? ಮಹಾಕವಿ ಕಾಳಿದಾಸ ತನ್ನ 'ರಘುವಂಶ' ಕಾವ್ಯದ ಆದಿಯಲ್ಲಿ ಶಬ್ದಾರ್ಥ ಸಂಬಂಧದ ಕುರಿತು ಹೇಳಿರುವ ಸುಪ್ರಸಿದ್ಧ ಮಾತಿಲ್ಲಿ ನೆನಪಾಗುತ್ತಿದೆ:

**ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।**
**ಜಗತಃ ಪಿತರೌ ವಂದೇ ಪಾರ್ವತಿ ಪರಮೇಶ್ವರೌ ॥**

"ಜಗತ್ತಿನ ತಾಯಿತಂದೆಗಳಾದ ಪಾರ್ವತೀ ಪರಮೇಶ್ವರರನ್ನು ಮಾತು–ಅರ್ಥಗಳ ಪರಿಜ್ಞಾನದ ಸಲುವಾಗಿ ವಂದಿಸುತ್ತೇನೆ. ಅವರು ಮಾತು–ಅರ್ಥಗಳ ಹಾಗೆ ಅನ್ಯೋನ್ಯಭಾವದಿಂದ ಕೂಡಿದವರಾಗಿದ್ದಾರೆ." ಸ್ವಾಮೀಜಿಯವರ ಕಾವ್ಯವು ಮಾತು–ಅರ್ಥಗಳ ಪರಿಪೂರ್ಣ ಅನ್ಯೋನ್ಯ ಭಾವದಿಂದ ಕೂಡಿದ್ದಾಗಿದೆ. ಇಂಥ ಕಾವ್ಯಕ್ಕೆ, ಮಾಡಿದ ಸಾಹಿತ್ಯಕೃಷಿಗೆ, ಮಣಿಯದೆ ಇರುವವರ್‍ಯಾರು?!

ಸ್ವಾಮೀಜಿಯವರು ತ್ರಿಕಾಲಾಬಾಧಿತ ಸತ್ಯವನ್ನು ಅಭಿವ್ಯಕ್ತಪಡಿಸುವ ದ್ರಷ್ಟಾರರಾದ್ದರಿಂದ, ಸುಸಂಸ್ಕೃತ ಚೈತನ್ಯವಾದದ್ದರಿಂದ ೧೮೯೮ರ ಜುಲೈ ನಾಲ್ಕರಂದು, ಹಿಂದು – ಇಂದು – ಮುಂದುಗಳನ್ನು ತೋರುವ ತಮ್ಮ ಪ್ರಜ್ಞಾವಿಶೇಷದಿಂದ ರಚಿಸಿದ **'ಜುಲೈ ನಾಲ್ಕನೇ ದಿನಕ್ಕೆ'** ಕವಿತೆ, ಒಂದೆಡೆಯಿಂದ ಅಮೆರಿಕದ ಸ್ವಾತಂತ್ರ್ಯದಿನವನ್ನು ಕುರಿತದದ್ದಾದರೂ, ಇನ್ನೊಂದೆಡೆಯಿಂದ ತ್ಯಾಗ ಸಂಘರ್ಷಗಳ ಮೂಲಕ ಮುಕ್ತಿಯೆಡೆಗೆ ನಡೆದ ಆತ್ಮನ ಸ್ವಾತಂತ್ರ್ಯವನ್ನು ಸಂಕೇತಿಸುವ ಭಾವಲಹರಿಯೂ ಆಗಿದೆ.

ಈ ಕವಿತೆ ರಚಿಸಿ ನಾಲ್ಕು ವರ್ಷದ ಬಳಿಕ, ಅದೇ ದಿನದಂದು, ಅಂದರೆ ೧೯೦೨ ರ ಜುಲೈ ೪ರಂದು ಸ್ವಾಮೀಜಿ ಶರೀರತ್ಯಾಗ ಮಾಡಿ ಪಂಚಭೂತಗಳಲ್ಲಿ ಬೆರೆತದ್ದರಿಂದ ಈ ಕವನಕ್ಕೆ ಮತ್ತಷ್ಟು ವಿಶೇಷ ಮಹತ್ವ ಕೂಡ ಬಂದಿದೆ.

**ನೂರು ಸಾಸಿರ ದಳದ ಕಮಲ ನಯನಗಳಿಂದ**
**ಒಲುಮೆಯಾಳವ ಸರಸಿ ತೆರೆಯುತ್ತಿವೆ;**
**ನಿನಗೆ ಸುಸ್ವಾಗತವ ಹಾರೈಸಿವೆ!**
**ಎಲ್ಲವೂ ನಿನಗೆ ಜಯಜಯವೆಂದಿವೆ!**
**ಓ ಬೆಳಕಿನ ಪ್ರಭುವೆ, ಸ್ವಾಗತವು ನಿನಗೆ;**
**ನೀನಿಂದು ಮುಕ್ತಿಯನು ಪಸರಿಸಿರುವೆ!**

ಈ ಕವಿತೆಯಲ್ಲಿ ಕಾಣುವ ಕವಿಗೂ ಲೋಕಾನುಭವಗಳಿಗೂ ಇರುವ ಸಂಬಂಧ ಕೇವಲ ಅರಿವಿನ ಸಂಬಂಧವಲ್ಲ, ಪ್ರಜ್ಞೆಯ ಸಂಬಂಧವೆಂಬುದನ್ನು ನಿರೂಪಿಸಿದರೆ, ಈ ಮುಂದೆ ಉಲ್ಲೇಖಿಸುವ 'ನೀ ಧನ್ಯ ಕನಸೆ!' ಕವಿತೆ ಆದರ್ಶದ ಕನಸುಗಳನ್ನು ಕಂಡ ವ್ಯಕ್ತಿಯೊಬ್ಬ ವಾಸ್ತವದ ಕಠಿಣತೆಗಳನ್ನು ಎದುರಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕೆಂಬುದನ್ನು ನಿರೂಪಿಸಿದೆ; ಕಠೋರ ವಾಸ್ತವವ ತೆರೆದಿಟ್ಟು, ಎಲ್ಲದಕ್ಕೂ ಸಿದ್ಧವಾಗಿರಲು ಕರೆಕೊಟ್ಟಿದೆ:

**ಸುಖವೆ ಸುರಿದರು, ದುಃಖ ಹರಿದರು,**
**ಪುಟಿಪುಟಿವ ಸಂತೋಷ ಮುಖದಿ ನಲಿದಾಡಿದರು,**
**ಸಂಕಟದ ಸಾಗರವೆ ಭೋರ್ಗರೆದರೂ**
**ಅವರವರ ಪಾತ್ರಗಳನಭಿನಯಿಸಬೇಕು,**
**ನಗಬೇಕು, ಅಳಬೇಕು,**
**ತನ್ನ ವೇಷವ ತಾನೆ ಧರಿಸಬೇಕು;**
**ಒಮ್ಮೆ ಬೆಳಗುವ ರವಿಯು, ಮತ್ತೊಮ್ಮೆ ಸುರಿಮಳೆಯು,**
**ಬದಲಾಗಿ ದೃಶ್ಯಗಳು ಸಾಗಲೇಬೇಕು !**

(ಮುಂದುವರೆಯುವುದು)